ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ 30 ಯೋಉಮಾ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:10-07-2019

# ಸುತ್ತೋಲೆ

ವಿಷಯ: ರಾಷ್ಟ್ರೀಯ ಅಲ್ಪ ಸಂಖ್ಯಾತರ ಆಯೋಗದ ಶಿಫಾರಸ್ಸು ವರದಿ 2012-13 – ಮೊಹಲ್ಲಾ ಕಮಿಟಿ ರಚನೆ ಕುರಿತು.

ಉಲ್ಲೇಖ: 1. ಭಾರತ ಸರ್ಕಾರದ ಪತ್ರ ಸಂಖ್ಯೆ: A-11013/27/2014 Estt ದಿನಾಂಕ: 02/04/2019.

—

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅದಿನಿಯಮ, 1993ರ ಪ್ರಕರಣ 2-ಎ ರಡಿ ಪಂಚಾಯತ್ ನೀತಿ ನಿರ್ದೇಶಕ ತತ್ವಗಳನ್ನು ಉಪಬಂಧಿಸಲಾಗಿದೆ. ಈ ಪ್ರಕರಣದ(ಎಕ್ಸ್)ರಲ್ಲಿ ಶಾಂತಿಯುತ ಸಮಾಜ ಮತ್ತು ಕೋಮುಸೌಹಾರ್ದವನ್ನು ಸಂರಕ್ಷಿಸುವ ಹಾಗೂ ಎಲ್ಲಾ ರೀತಿಯ ಹಿಂಸೆಗಳನ್ನು ತಡೆಗಟ್ಟುವ ಸುರಕ್ಷಿತ ಮತ್ತು ಸಹನಶೀಲ ಸಮುದಾಯವನ್ನು ಪೋಷಿಸುವ ಅಂಶಗಳನ್ನೊಳಗೊಂಡಿರುತ್ತದೆ.

ರಾಷ್ಟ್ರೀಯ ಅಲ್ಪ ಸಂಖ್ಯಾತರ ಆಯೋಗವು ಮಹಾರಾಷ್ಟ್ರ ಸರ್ಕಾರದಲ್ಲಿ ಮೊಹಲ್ಲಾ ಸಮಿತಿಗಳ ಪಾತ್ರವನ್ನು ವಿಶ್ಲೇಷಿಸಿ ಎಲ್ಲಾ ರಾಜ್ಯಗಳಲ್ಲಿನ ಪಂಚಾಯತಿ ರಾಜ್ ಸಂಸ್ಥೆಗಳು ಸದರಿ ಶಿಫಾರಸ್ಸನ್ನು ಸಮುದಾಯ ಸಹಭಾಗಿತ್ವ ಮತ್ತು ಸಮನ್ವಯ ಸಲುವಾಗಿ ಅಳವಡಿಸಿಕೊಳ್ಳಲು ತಿಳಿಸಿರುವ ಬಗ್ಗೆ ಉಲ್ಲೇಖಿತ ಪತ್ರದಲ್ಲಿ ಭಾರತ ಸರ್ಕಾರದ ಪಂಚಾಯತಿ ರಾಜ್ ಮಂತ್ರಾಲಯ ಪ್ರಸ್ತಾಪಿಸಿ ಅದರಂತೆ ಕ್ರಮವಹಿಸುವ ಬಗ್ಗೆ ಶಿಫಾರಸ್ಸು ಮಾಡಿದೆ.

ಪ್ರಜಾಪ್ರಭುತ್ವದಲ್ಲಿ ಎಲ್ಲಾ ವರ್ಗದ ಜನರ ಕ್ರಿಯಾಶೀಲ ಭಾಗವಹಿಸುವಿಕೆಯಿಂದ ಶಾಂತಿ ಮತ್ತು ಸೌಹಾರ್ದತೆಯನ್ನು ಕಾಪಾಡಬಹುದಾಗಿದೆ. ಮೊಹಲ್ಲಾ ಸಮಿತಿಗಳು ಸಮುದಾಯದ ರಕ್ಷಣೆ ಮತ್ತು ಶಾಂತಿ ಪಾಲನೆ ಪ್ರಕ್ರಿಯೆಯಲ್ಲಿ ಪ್ರಮುಖ ಅಂಗಗಳಾಗಿ ಕಾರ್ಯನಿರ್ವಹಿಸಬೇಕಾಗಿದೆ.

ಗ್ರಾಮ ಪಂಚಾಯತಿ ಹಂತದಲ್ಲಿ ಮೊಹಲ್ಲಾ ಸಮಿತಿಗಳನ್ನು ಸ್ಥಳೀಯ ಹಿರಿಯ ನಾಗರೀಕರು ಹಾಗೂ ಎಲ್ಲಾ ಸಮುದಾಯಗಳ ಗೌರವಾನ್ವಿತ ಸದಸ್ಯರನ್ನು ಒಳಗೊಂಡಂತೆ ರಚಿಸಬೇಕು. ಸದರಿ ಸಮಿತಿಯು ಗ್ರಾಮ ಪಂಚಾಯತಿ ಮತ್ತು ಸ್ಥಳೀಯ ಆರಕ್ಷಕ ಠಾಣೆಯ ಸಮನ್ವಯದಲ್ಲಿ ಕಾಲಕಾಲಕ್ಕೆ ಸಭೆ ನಡೆಸಬೇಕು. ಈ ಸಮಿತಿಗಳು ಪ್ರಮುಖ ಕಾರ್ಯಕ್ರಮ ಆಯೋಜನೆ ಹಾಗೂ ಆಚರಣೆ ಸಂದರ್ಭದಲ್ಲಿ ಶಾಂತಿ ಮತ್ತು ಸೌಹಾರ್ದತೆ ಕಾಪಾಡಲು ವಿಶೇಷ ಸಭೆಗಳನ್ನು ನಡೆಸಬೇಕು. ಮೊಹಲ್ಲಾ ಸಮಿತಿಗಳಲ್ಲಿ ಜನರ ಸಹಭಾಗಿತ್ವ ಮತ್ತು ಪ್ರಜಾಪ್ರಭುತ್ವದ ಮಾದರಿಗಳು ಗ್ರಾಮ ಪಂಚಾಯತಿಗಳಲ್ಲಿ ಸಮುದಾಯದೊಂದಿಗಿನ ಶಾಂತಿ ಪಾಲನೆ, ಸೌಹಾರ್ದತೆ ಹಾಗೂ ಪಾಲ್ಗೊಳ್ಳುವಿಕೆಯಲ್ಲಿನ ಉತ್ಸಾಹವನ್ನು ಬಲಪಡಿಸುತ್ತವೆ.

ಮೇಲ್ಕಂಡ ಹಿನ್ನಲೆಯಲ್ಲಿ, ಅಗತ್ಯವಿರುವ ಮೊಹಲ್ಲಾ ಸಮಿತಿಗಳನ್ನು ಜಿಲ್ಲೆ, ತಾಲ್ಲೂಕು ಮತ್ತು ಹೋಬಳಿ/ಗ್ರಾಮ ಪಂಚಾಯತಿ ಮಟ್ಟದಲ್ಲಿ ರಚಿಸಿ ಸಮಿತಿಯ ಗೌರವಾನ್ವಿತ ಸದಸ್ಯರುಗಳಿಗೆ ಸಮಿತಿಯ ಉದ್ದೇಶ, ಚಟುವಟಿಕೆಗಳು ಹಾಗೂ ಅವರ ಜವಾಬ್ದಾರಿಗಳನ್ನು ಮನವರಿಕೆ ಮಾಡಿಕೊಟ್ಟು, ಕಾಲಕಾಲಿಕ ಸಭೆಗಳು ನಡೆಯುವಂತೆ ನೋಡಿಕೊಳ್ಳಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಆದ್ಯತೆ ನೀಡಿ ಸಮನ್ವಯ ವಹಿಸಲು ಕೋರಿದೆ. ಈ ದಿಸೆಯಲ್ಲಿ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತಿಯ ಮುಖ್ಯ

ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು ಕೈಗೊಂಡಿರುವ ಕ್ರಮಗಳ ಅನುಪಾಲನೆಯನ್ನು ದಿನಾಂಕ:30/07/2019ರೊಳಗೆ ಸರ್ಕಾರಕ್ಕೆ ಕಳುಹಿಸಲು ಕೋರಿದೆ.

(ಎಲ್.ಕೆ.ಅತೀಕ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ:

1. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
3. ರಾಜ್ಯದ ಎಲ್ಲಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು.
4. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪ್ರತಿಯನ್ನು ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮ ಪಂಚಾಯತಿಗಳ PDOಗಳಿಗೆ ನೀಡಿ ಕಾಲಮಿತಿಯೊಳಗೆ ಅನುಪಾಲನೆ ಪಡೆಯುವ ಸಲುವಾಗಿ.
5. ನಿರ್ದೇಶಕರು, ಇ–ಆಡಳಿತ – ಸದರಿ ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್ ನಲ್ಲಿ ಅಪ್‌ಲೋಡ್ ಮಾಡಲು ಕೋರಿದೆ.

<u>ಪ್ರತಿ ಮಾಹಿತಿಗಾಗಿ:</u>

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
2. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಸಂಸದೀಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿರವರು, ಕೊಠಡಿ ಸಂಖ್ಯೆ:204, ಬಹುಮಹಡಿ ಕಟ್ಟಡ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿಗಳು (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
4. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಎಲ್ಲಾ ಆಯುಕ್ತರುಗಳು, ನಿರ್ದೇಶಕರುಗಳು, ಎಲ್ಲಾ ವಿಭಾಗಗಳ ಮುಖ್ಯಸ್ಥರು, IFA ಮತ್ತು SIRD.

No. A-11013/27/2014-Estt.
Government of India
Ministry of Panchayati Raj

11[th] Floor, Jeevan Prakash Building,
25, K.G.Marg, New Delhi-110 001,
Dated: the 2[nd] April, 2019

To

The Principal Secretary,
Panchayati Raj Department,
All States/UTs.

Subject: Action Taken Memorandum (ATM) on the recommendations contained in the Annual Report of the Commission for Minorities for the year 2012-13 (20[th] Report)-reg.

Sir/Madam,

I am directed to say that the National Commission for Minorities in its Annual Report for the period 2012-13 (20[th] Report) has, *inter-alia*, recommended the following:-

***"It is recommended that publications with reference to the evolution and functioning of Mohalla Committees in Mumbai should be used as bench mark for other states and also in promoting interaction between communities in all parts of India. The Ministry of Panchayati Raj might also find these useful in promoting community participation in development activities and provision of services, which is the principal objective of the Panchayati Raj".***

2. In this context, a brief on Mohalla Committee in Mumbai (extract taken from website of Maharashtra police) is also enclosed.

3. Accordingly, the State Governments are requested to issue suitable instructions to the Panchayats in their States for implementation of the recommendations of the National Commission for Minorities under intimation to this Ministry.

Encl: As Above

Yours faithfully,

(N.P. Toppo)
Under Secretary to the Govt. of India
Tel: 23356124

## Mohalla Committees

"Policing in a fast changing socio-economic environment is a complex task. In a democracy it is an accepted view that policing cannot be accomplished without people's participation. This is more so in a democracy such as ours with its pulls and pressures due to various religions, castes and the sheer numbers involved. Mohalla Committees (Mohalla Committees) are an integral part of the community policing initiative.

"As the name suggests, Mohalla Committees are formed at the local area level and consist of a cross-section of society. The local Police Station acts as a facilitator for the formation and functioning of the Mohalla Committees. The main task of the Mohalla Committees is to assist the Police in maintenance of law and order and prevention of crime in the area. The Mohalla Committees members act as eyes and ears and pass on relevant information pertaining to communal, social, law & order related issues to the local beat officer with whom they are constantly in touch. Besides this, they play an important role in prevention and management of law and order situations. The Mohalla Committees's meet at regular intervals throughout the year. They discuss and solve issues relating to local crime and disputes through active involvement of the beat staff. During major festivals, special meetings are convened in order to ensure that peace prevails in the area.

"Special care is taken to nominate suitable and respectable members of the community to the Mohalla Committees. Measures and decisions taken during the meetings are disseminated to the community through its members. Suggestions of the Mohalla Committees members are given due weightage by the Police Station in identifying and implementing crime prevention measures.

"People's participation and democratic approach of the Mohalla Committee movement has been widely appreciated over the years. Mohalla Committees have proved their usefulness time and time again and have now become an integral part of the Maharastra Police's community policing initiatives.

[Extract taken from website of Maharashtra police www.mahapolice.gov.in]

...............